ರಾಜ್ಯ ಸರ್ಕಾರದ ನಡವಳಿಗಳು

ವಿಷಯ: 2015-16ನೇ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಯವರು ಬೃಹತ್ ಬೆಂಗಳೂರು ಮಹಾನಗರಪಾಲಿಕೆಗೆ ಘೋಷಿಸಿರುವ ರೂ.1000.00ಕೋಟಿ ಅನುದಾನದಡಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:-1) ಸರ್ಕಾರದ ಆದೇಶ ಸಂಖ್ಯೆ:ವಅಇ 326 ಎಂಎನ್‌ವೈ 2015, ದಿನಾಂಕ:19-06-2015.

2) ಆಯುಕ್ತರು, ಬಿಬಿಎಂಪಿ ರವರ ಪತ್ರ ಸಂಖ್ಯೆ: ಮುಅ (ರಮೂಸೌ)/ಪಿಆರ್/154/2015-16, ದಿನಾಂಕ:28-10-2015.

ಪ್ರಸ್ತಾವನೆ:

ದಿನಾಂಕ:08-05-2015ರಂದು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಬೃಹತ್ ಬೆಂಗಳೂರು ಮಹಾನಗರಪಾಲಿಕೆಯ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬೆಂಗಳೂರು ನಗರದ ಪ್ರಮುಖ ರಸ್ತೆಗಳ ಅಭಿವೃದ್ಧಿಗಾಗಿ ಲೋಕೋಪಯೋಗಿ ಇಲಾಖೆ ಮತಿಯಿಂದ ನಿರ್ವಹಿಸಲು ಸರ್ಕಾರವು ರೂ.1000.00ಕೋಟಿ ವಿಶೇಷ ಅನುದಾನ ಒದಗಿಸುವುದಾಗಿ ತಿಳಿಸಿರುವ ಹಿನ್ನೆಲೆಯಲ್ಲಿ ಒಟ್ಟು ರೂ.1000.00ಕೋಟಿ ಅಂದಾಜು ವೆಚ್ಚದ ಕಾಮಗಾರಿಗಳಿಗೆ ಅನುಮೋದನೆ ನೀಡಲು ಸಭೆಯ ಸಂಪುಟದ ಒಪ್ಪಿಗೆ ಕೋರಿ, ದಿನಾಂಕ:14-06-2015 ಮತ್ತು 29-07-2015ರಂದು ನಡೆವ ಸಚಿವ ಸಂಪುಟ ಸಭೆಯಲ್ಲಿ ಪ್ರಸ್ತಾಪಿಸಲಾಗಿ, ರೂ.1000.00ಕೋಟಿ ವೆಚ್ಚದ ಕಾಮಗಾರಿಗಳ ಪೈಕಿ ರೂ.34242.60ಲಕ್ಷಗಳ ಅಂದಾಜು ವೆಚ್ಚದ 114 ಕಾಮಗಾರಿಗಳಿಗೆ ಮಾತ್ರ ಸಚಿವ ಸಂಪುಟ ಸಭೆಯು ಅನುಮೋದನೆ ನೀಡಿದ ಹಿನ್ನೆಲೆಯಲ್ಲಿ ರೂ.34242.60ಲಕ್ಷಗಳ ಅಂದಾಜು ವೆಚ್ಚದ 114 ಕಾಮಗಾರಿಗಳಿಗೆ ಮೇಲೆ ಓದಲಾದ (1)ರ ಆದೇಶದಲ್ಲಿ ಅನುಮೋದನೆ ನೀಡಲಾಗಿರುತ್ತದೆ.

ಮೇಲೆ ಮೇಲೆ ಓದಲಾದ (1)ರ ಆದೇಶದಲ್ಲಿ ಅನುಮೋದನೆ ನೀಡಿರುವ ರೂ.34242.60ಲಕ್ಷಗಳ ಅಂದಾಜು ವೆಚ್ಚದ ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ಪರಿಶೀಲಿಸಲಾಗಿದ್ದು, ಪರಿಶೀಲನೆ ನಂತರ, ರೂ.74.00ಕೋಟಿಗಳಷ್ಟು ಉಳಿತಾಯ ಕಂಡು ಬಂದಿರುವುದಾಗಿ ಆಯುಕ್ತರು, ಬಿಬಿಎಂಪಿ ರವರು ಮೇಲೆ ಓದಲಾದ (2)ರ ಪತ್ರದಲ್ಲಿ ತಿಳಿಸಿರುತ್ತಾರೆ.

ಇತ್ತೀಚೆಗೆ ಪಾಲಿಕೆ ಚುನಾವಣೆ ನಡೆದ ಹಿನ್ನೆಲೆಯಲ್ಲಿ ಆಯ್ಕೆಯಾದ ನಗರಪಾಲಿಕೆ ಸದಸ್ಯರು, ಪೂರ್ವ ಮಹಾಪೌರರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ವಲಯ ಮಟ್ಟದಲ್ಲಿ ನಡೆಸಿದ ತಪಾಸಣೆಯ ಸಂದರ್ಭದಲ್ಲಿ ವಾರ್ಡ್ ಮಟ್ಟದ ಅತ್ಯಗತ್ಯವಿರುವ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಸೂಚಿಸಿದ ಹಿನ್ನೆಲೆಯಲ್ಲಿ ಪ್ರಾಮುಖ್ಯತೆಗನುಗುಣವಾಗಿ ಮೇಲೆ ತಿಳಿಸಿರುವ ಉಳಿಕೆ ಅನುದಾನ ರೂ.74.00ಕೋಟಿಗಳು, ಸಚಿವ ಸಂಪುಟ ಸಭೆಯ ಕೈಗೊಳ್ಳಲಿರುವ ರೂ.657.57ಕೋಟಿಗಳು ಮತ್ತು ರೂ.65.68ಕೋಟಿಗಳು ಸೇರಿದಂತೆ ಒಟ್ಟು ರೂ.797.26ಕೋಟಿಗಳ ಪರಿಷ್ಕೃತ ಕ್ರಿಯಾಯೋಜನೆಯನ್ನು ತಯಾರಿಸಿರುವುದಾಗಿಯೂ, ಹೆಚ್ಚುವರಿಯಾಗುವ ರೂ.65.68ಕೋಟಿಗಳನ್ನು ಬಿ.ಬಿ.ಎಂ.ಪಿ ಯು ತನ್ನ ಸ್ವಂತ ಅನುದಾನದಿಂದ ಭರಿಸಲಾಗುವುದೆಂದೂ ತಿಳಿಸಿ, ಪರಿಷ್ಕೃತ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವಂತೆ ಆಯುಕ್ತರು, ಬಿಬಿಎಂಪಿ ರವರು ಮೇಲೆ ಓದಲಾದ (2)ರ ಪತ್ರದಲ್ಲಿ ಕೋರಿರುತ್ತಾರೆ.

ಮೇಲ್ಕಂಡ ರೂ.797.26ಕೋಟಿಗಳ ಪರಿಷ್ಕೃತ ಕ್ರಿಯಾಯೋಜನೆಯಲ್ಲಿ ಒಟ್ಟು 1156 ಸಂಖ್ಯೆ ಕಾಮಗಾರಿಗಳಿದ್ದು, ಬೃಹತ್ ಸಂಖ್ಯೆಯ ಈ ಕಾಮಗಾರಿಗಳ ಸ್ಥಳ ಪರಿಶೀಲನೆ, ಅಂದಾಜು ಪಟ್ಟಿ ತಯಾರಿಕೆ ಹಾಗೂ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಲೋಕೋಪಯೋಗಿ ಇಲಾಖೆಯಿಂದ ಕಾಲವಿಳಂಬವಾಗುವ ಸಾಧ್ಯತೆಯಿರುವುದರಿಂದ ಹಾಗೂ ಬಿಬಿಎಂಪಿಯಲ್ಲಿ ಈಗಾಗಲೇ 198 ವಾರ್ಡ್ ಮಟ್ಟದ ಸಹಾಯಕ ಅಭಿಯಂತರರು, ಆರ್ ವಿಭಾಗ ಮಟ್ಟದ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ವಿಭಾಗ ಮಟ್ಟದಲ್ಲಿ ಕಾರ್ಯಪಾಲಕ ಅಭಿಯಂತರರ ಸಿಬ್ಬಂದಿವರ್ಗವಿದ್ದು, ಈ ವಾರ್ಡ್ ಮಟ್ಟದ ಕಾಮಗಾರಿಗಳನ್ನು ಬಿಬಿಎಂಪಿ ಮತಿಯಿಂದಲೇ ಅನುಷ್ಠಾನಗೊಳಿಸುವುದು ಸೂಕ್ತವಾಗಿರುತ್ತದೆ ಎಂದು ತಿಳಿಸಿ, ಸದರಿ ಕಾಮಗಾರಿಗಳನ್ನು ಬಿಬಿಎಂಪಿ ಮತಿಯಿಂದಲೇ ಅನುಷ್ಠಾನಗೊಳಿಸಲು ಅನುಮೋದನೆ ನೀಡುವಂತೆಯೂ ಸಹ ಆಯುಕ್ತರು, ಬಿಬಿಎಂಪಿ ರವರು ಮೇಲೆ ಓದಲಾದ (2)ರ ಪತ್ರದಲ್ಲಿ ಕೋರಿರುತ್ತಾರೆ.

ಆಯುಕ್ತರು, ಬಿಬಿಎಂಪಿ ...ರ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ 449 ಎಸ್ಎಫ್ಸಿ 2015
ಬೆಂಗಳೂರು, ದಿನಾಂಕ:24-11-2015.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಿನಾಂಕ:08-05-2015 ರಂದು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಬೃಹತ್ ಬೆಂಗಳೂರು ಮಹಾನಗರಪಾಲಿಕೆಗೆ (ಬಿಬಿಎಂಪಿ) ಘೋಷಿಸಿರುವ ರೂ.1000.00ಕೋಟಿ ವಿಶೇಷ ಅನುದಾನದಡಿ ಕೈಗೊಳ್ಳುವ ರೂ.797.26ಕೋಟಿಗಳ ಅಂದಾಜು ವೆಚ್ಚದ ಅನುಬಂಧದಲ್ಲಿ ತಿಳಿಸಿರುವ 1156 ಕಾಮಗಾರಿಗಳ ಕ್ರಿಯಾ ಯೋಜನೆಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಿದೆ.

ಈ ಆದೇಶವನ್ನು ಕೆಳಕಂಡ ಷರತ್ತಿಗೊಳಪಟ್ಟು ಹೊರಡಿಸಲಾಗಿದೆ.

1. ಈ ಆದೇಶದಲ್ಲಿ ನೀಡಿರುವ ಅನುಮೋದನೆಯು ಕಾಮಗಾರಿಗಳ ಪಟ್ಟಿಗೆ ನೀಡಿರುವ ಅನುಮೋದನೆಯೇ ಹೊರತು, ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ನೀಡಿರುವ ಆಡಳಿತಾತ್ಮಕ ಅನುಮೋದನೆಯಲ್ಲ. ಆದ್ದರಿಂದ, ಅನುಮೋದನೆಗೊಂಡ 1156 ಕಾಮಗಾರಿಗಳಿಗೆ ಬೃಹತ್ ಬೆಂಗಳೂರು ಮಹಾನಗರಪಾಲಿಕೆಯು ಡಿಪಿಆರ್ಗಳನ್ನು ಸಿದ್ಧಪಡಿಸಿ, ಸಕ್ಷಮ ಪ್ರಾಧಿಕಾರಗಳಿಂದ ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆ ಪಡೆದು, ಪ್ಯಾಕೇಜ್ವಾರು ಟೆಂಡರ್ ಕರೆದು ಕಾಮಗಾರಿಗಳನ್ನು ಅನುಷ್ಠಾನಗೊಳಿಸತಕ್ಕದ್ದು.

2. ಮೇಲೆ ಓದಲಾದ (1)ರ ಆದೇಶದಲ್ಲಿ ಅನುಮೋದನೆ ನೀಡಿರುವ ಕಾಮಗಾರಿಗಳು ಮತ್ತು ಈ ಆದೇಶದಲ್ಲಿ ಅನುಮೋದನೆಯಾಗಿರುವ ಒಟ್ಟಾರೆ ಕಾಮಗಾರಿಗಳ ಅನುಷ್ಠಾನ ಮೊತ್ತವು ಮಾನ್ಯ ಮುಖ್ಯಮಂತ್ರಿಯವರು ದಿನಾಂಕ:08-05-2015ರ ಸಭೆಯಲ್ಲಿ ಘೋಷಿಸಿರುವ ರೂ.1000.00ಕೋಟಿಗಳಿಗಿಂತ ಹೆಚ್ಚುವರಿಯಾದಲ್ಲಿ, ಹೆಚ್ಚುವರಿ ಮೊತ್ತವನ್ನು ಬೃಹತ್ ಬೆಂಗಳೂರು ಮಹಾನಗರಪಾಲಿಕೆಯು ತನ್ನ ಸ್ವಂತ ಅನುದಾನದಿಂದ ಭರಿಸತಕ್ಕದ್ದು.

3. ಈ ಕ್ರಿಯಾ ಯೋಜನೆಯಲ್ಲಿ ತೆಗೆದುಕೊಳ್ಳಲಾಗಿರುವ ಕಾಮಗಾರಿಗಳನ್ನು ಇತರೆ ಯಾವುದೇ ಯೋಜನೆಯಡಿಯಲ್ಲಿ ಕೈಗೊಂಡಿರುವುದಿಲ್ಲವೆಂಬುದನ್ನು ಪಾಲಿಕೆಯು ಪೂರ್ವಾನ್ವಯವಾಗಿ ಖಚಿತಪಡಿಸಿಕೊಳ್ಳತಕ್ಕದ್ದು.

4. ಅನುಮೋದಿತ ಕಾಮಗಾರಿಗಳನ್ನು ನಿರ್ವಹಿಸುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು-2000, ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 20 ಇಜಿವಿ 2009 (4), ದಿನಾಂಕ 13-07-2009 ರಲ್ಲಿನ ಎಲ್ಲಾ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ಬಿಬಿಎಂಪಿ ವತಿಯಿಂದ ಟೆಂಡರ್ ಪ್ರಕ್ರಿಯೆಯನ್ನು ಇ-ಪ್ರಕ್ಯೂರ್ಮೆಂಟ್ ಮೂಲಕ ಕಡ್ಡಾಯವಾಗಿ ಕೈಗೊಳ್ಳತಕ್ಕದ್ದು.

5. ಅನುಮೋದನೆ ನೀಡಲಾದ ಕ್ರಿಯಾಯೋಜನೆಯಂತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸತಕ್ಕದ್ದು. ಅನಿವಾರ್ಯ ಕಾರಣಗಳಿಂದ ಬದಲಾವಣೆಗಳು ಅತ್ಯಂತ ಅವಶ್ಯಕ ಎಂದು ಕಂಡು ಬಂದಲ್ಲಿ ಅಂತಹ ಕಾಮಗಾರಿಗಳನ್ನು ಸೂಕ್ತ ಸಮಜಾಯಿಷಿಯೊಂದಿಗೆ ಆಯುಕ್ತರು, ಬಿಬಿಎಂಪಿ, ಇವರು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ದಿನಾಂಕ:19-11-2015 ರ 23ನೇ ಸಚಿವ ಸಂಪುಟ ಸಭೆಯ
ಪ್ರಕರಣ ಸಂಖ್ಯೆ:ಸಿ:644/2015 ರಡಿ ಕೈಗೊಂಡ ನಿರ್ಣಯದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ಎಸ್ ಭಾಗ್ಯಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, ಲೆಕ್ಕ ತಪಾಸನೆ /ಲೆಕ್ಕ ಪತ್ರ ಬೆಂಗಳೂರು, ಕರ್ನಾಟಕ.
2. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು
3. ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ವಿ.ವಿ.ಕೇಂದ್ರ, ಬೆಂಗಳೂರು.
4. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
5. ಜಂಟಿ ನಿರ್ದೇಶಕರು (ಹಣಕಾಸು), ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
6. ಉಪ ನಿರ್ದೇಶಕರು, ಮ್ಯಾನೇಜ್‌ಮೆಂಟ್ ನೆಟವರ್ಕ್, ಖಜಾನೆ ಇಲಾಖೆ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
7. ಖಜಾನೆ ಅಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8. ಮುಖ್ಯ ಆರ್ಥಿಕ ಅಧಿಕಾರಿ, ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು.
9. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು.
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ
11. ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು(ಎಂ & ಯುಡಿಎ), ನಗರಾಭಿವೃದ್ಧಿ ಇಲಾಖೆ.
12. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-9), ವಿಧಾನ ಸೌಧ, ಬೆಂಗಳೂರು.
13. ಲೆಕ್ಕಾಧೀಕ್ಷಕರು, ತಾಂತ್ರಿಕ ಕೋಶ, ನಗರಾಭಿವೃದ್ಧಿ ಇಲಾಖೆ.
14. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

Annexure to G.O No. UDD 4 2015, Dated:24-11-2015.

(Rs In Lakhs)

Sl No	Constituency	Ward No.	Name of the work	Est. Cost
20	Yelahanka	3	Providing asphalting to roads and improvements to drains in AMS Layout, Dr.chandrappa layout and bharathnagara in ward no.03 yelahanka satellite town sub-division	75.00
21	Yelahanka	3	Construction of Link road from Yelahanka New town Shivamandira road to Attur lake in ward no.03 yelahanka satellite town sub-division	200.00
22	Yelahanka	3	Construction of Link road from Sandeep unnikrishna road to Ambhabhavani temple via Doddabettahalli road along Existing Gas pipe line in ward no:03 yelahanka satellite town sub-division	110.00
23	Yelahanka	4	Asphalting to roads and improvemenst to drains and footpath at 1st cross, 1st main, 1st cross, 28th cross, 9th cross, 12th main, 13th cross, 11th cross, 12th cross and surroundings at Judicial Layout in ward no 04	99.00
24	Yelahanka	4	Improvements of roads, drains and footpath at 1st main, 6th cross, 8th A cross, 9th A cross and surroundings at A sector in ward no 04	98.00
25	Yelahanka	4	Improvements of roads, drains and footpath at RTO complex road, 15th B cross and 14th B cross at B sector in ward no 04	99.00
26	Yelahanka	4	Improvements of roads, drains and footpath at PM Layout in ward no 04	50.00
27	Yelahanka	4	Improvements of roads, drains at Sharadanagara,1st main and 2nd main,Mathrulayout, 1st cross, 4th cross and 5th cross, in ward no 04	50.00
28	Yelahanka	4	Improvements of drains and footpath at Janapriya apartment to Gnanadeepika School in ward no 04 in	50.00
29	Yelahanka	4	Providing and formation of footpath at Yelahanka new bus stand road in ward no.04	92.70
30	Yelahanka	4	Improvements of roads and drains footpath coverings to SWD drains at GKVK layout in ward no 04	54.00
31	Bytarayanapura	5	Improvements Roads and Drain Asphalting to M.C.E.H.S Layout Cross Road Near Venkateswara Temple in ward No. 05 Byatarayanaprua Sub Division	25.00

(36)

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2015–16ನೇ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಯವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಘೋಷಿಸಿರುವ ಅನುದಾನದಲ್ಲಿ ಅಟ್ಟೂರು ವಾರ್ಡ್ ನಂ.3ರ ಕ್ರಿಯಾ ಯೋಜನೆಯ ಕೆಲವು ಕಾಮಗಾರಿಗಳನ್ನು ಬದಲಾದ ಕಾಮಗಾರಿಗಳಾಗಿ ಕೈಗೆತ್ತಿಕೊಳ್ಳಲು ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:- 1. ಸರ್ಕಾರದ ಆದೇಶ ಸಂಖ್ಯೆ: ನಅಇ 449 ಎಸ್ಎಫ್ಸಿ 2015, ದಿನಾಂಕ: 24–11–2015.

2. ಆಯುಕ್ತರು, ಬಿಬಿಎಂಪಿ ಇವರ ಪತ್ರ ಸಂಖ್ಯೆ: ಬಿ.ಬಿ.ಎಂ.ಪಿ./ಅ/ಪಿಆರ್/650/2016–17, ದಿನಾಂಕ: 10–06–2016.

ಪ್ರಸ್ತಾವನೆ:-

ಮೇಲೆ (1) ರಲ್ಲಿ ಓದಲಾದ ದಿನಾಂಕ: 24–11–2015ರ ಆದೇಶದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲು ಮಾನ್ಯ ಮುಖ್ಯಮಂತ್ರಿಗಳು 2015–16ನೇ ಸಾಲಿನಲ್ಲಿ ರೂ.1000.00 ಕೋಟಿ ವಿಶೇಷ ಅನುದಾನದಡಿ ಕೈಗೊಳ್ಳುವ ರೂ. 797.26 ಕೋಟಿಗಳ ಅಂದಾಜು ಮೊತ್ತಕ್ಕೆ ಒಟ್ಟು 1156 ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆಯನ್ನು ನೀಡಲಾಗಿದೆ.

ಮೇಲೆ ಓದಲಾದ (2) ರಲ್ಲಿ ದಿನಾಂಕ: 10–06–2016ರ ಪತ್ರದಲ್ಲಿ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರು ಅಟ್ಟೂರು ವಾರ್ಡ್ ನಂ.3 ರಲ್ಲಿನ ಎರಡು ಕಾಮಗಾರಿಗಳನ್ನು ಬದಲಾವಣೆ ಮಾಡಿ ನಿರ್ವಹಿಸಲು ಮಾನ್ಯ ಶಾಸಕರು, ಯಲಹಂಕ ವಿಧಾನಸಭಾ ಕ್ಷೇತ್ರ ರವರು ಕೋರಿದ್ದು, ಅದರಂತೆ, ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರು ಪೈಪ್‌ಲೈನ್ ಅಳವಡಿಸಲು ರಸ್ತೆಗಳನ್ನು ಅಗೆದಿದ್ದು, ಸಾರ್ವಜನಿಕರ ಓಡಾಟಕ್ಕೆ ತುಂಬಾ ತೊಂದರೆಯಾಗುತ್ತಿದ್ದು, ಸದರಿ ಬದಲಾದ ಕಾಮಗಾರಿಗಳನ್ನು ಈ ಕೆಳಕಂಡ ಕಾಮಗಾರಿಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಬದಲಾದ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

(ರೂ.ಲಕ್ಷಗಳಲ್ಲಿ)

ಕ್ರ ಸಂ	ಮಂಜೂರಾದ ಕಾಮಗಾರಿಯ ಹೆಸರು	ಮಂಜೂರಾದ ಮೊತ್ತ (ಲಕ್ಷಗಳಲ್ಲಿ)	ಬದಲಾಗಿ ನಿರ್ವಹಿಸಲು ಅವಶ್ಯವಿರುವ ಕಾಮಗಾರಿಯ ಹೆಸರು	ಅಂದಾಜು ಮೊತ್ತ (ಲಕ್ಷಗಳಲ್ಲಿ)
1	Construction of link road from Yelahanka new town shiva mandira road to Attur lake in ward no 03 Yelahanka satellite town sub division	200.00	Improvements to roads and drains at Attur village Attur layout Santhosh Nagara Muneshwara Nagara in ward no-03	200.00
2	Construction of link road from Sandeepunnikrishnan road to Amba Bhavani temple via Doddabettahalli road along existing Gas pipe line in ward no-03 Yelhanka satellite Town Sub division.	110.00	Improvements to roads and drains at Akshaya Nagara Chitra layout, Childkadinne and other areas in war no-03	110.00

..2.

(35)

ಅದರಂತೆ, ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ನಅಇ 315 ಎಸ್‌ಎಫ್‌ಸಿ 2016,
ಬೆಂಗಳೂರು, ದಿನಾಂಕ: 01-09-2016

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ 2015-16ನೇ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಯವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಘೋಷಿಸಿರುವ ರೂ.1000.00 ಕೋಟಿ ವಿಶೇಷ ಅನುದಾನ ಕೈಗೊಳ್ಳುವ ರೂ.797.26 ಕೋಟಿಗಳ ಅಂದಾಜು ವೆಚ್ಚದಲ್ಲಿ ತಿಳಿಸಿರುವ 1156 ಕಾಮಗಾರಿಗಳ ಕ್ರಿಯಾ ಯೋಜನೆಗೆ ಸಂಬಂಧಪಟ್ಟಂತೆ ಕೈಗೊಳ್ಳುವ ಕಾಮಗಾರಿಗಳ ಕ್ರಿಯಾ ಯೋಜನೆಗಳಿಗೆ ಸಂಬಂಧಿಸಿದಂತೆ ಅನುಮೋದನೆ ನೀಡಿ ಹೊರಡಿಸಿರುವ ಸರ್ಕಾರದ ಆದೇಶ ಸಂಖ್ಯೆ: ನಅಇ 449 ಎಸ್‌ಎಫ್‌ಸಿ 2015, ದಿನಾಂಕ: 24-11-2015 ರಲ್ಲಿನ ಅನುಬಂಧದಲ್ಲಿನ ಕಾಮಗಾರಿಗಳಿಗೆ ಬದಲಾಗಿ ಈ ಕೆಳಕಂಡ ಬದಲಾದ ಕಾಮಗಾರಿಗಳಿಗೆ ಅನುಮೋದನೆ ನೀಡಿ ಆದೇಶಿಸಿದೆ.

(ರೂ.ಲಕ್ಷಗಳಲ್ಲಿ)

ಕ್ರ ಸಂ	ಮಂಜೂರಾದ ಕಾಮಗಾರಿಯ ಹೆಸರು	ಮಂಜೂರಾದ ಮೊತ್ತ (ಲಕ್ಷಗಳಲ್ಲಿ)	ಬದಲಾಗಿ ನಿರ್ವಹಿಸಲು ಅವಶ್ಯವಿರುವ ಕಾಮಗಾರಿಯ ಹೆಸರು	ಅಂದಾಜು ಮೊತ್ತ (ಲಕ್ಷಗಳಲ್ಲಿ)
1	Construction of link road from Yelahanka new town shiva mandira road to Attur lake in ward no 03 Yelahanka satellite town sub division	200.00	Improvements to roads and drains at Attur village Attur layout Santhosh Nagara Muneshwara Nagara in ward no-03	200.00 ✓
2	Construction of link road from Sandeepunnikrishnan road to Amba Bhavani temple via Doddabettahalli road along existing Gas pipe line in ward no-03 Yelhanka satellite Town Sub division.	110.00	Improvements to roads and drains at Akshaya Nagara Chitra layout, Chikkadinne and other areas in war no-03	110.00 ✓

ಉಳಿದಂತೆ, ಸದರಿ ಕಾಮಗಾರಿಗಳ ಕ್ರಿಯಾ ಯೋಜನೆಗಳಿಗೆ ಹೊರಡಿಸಿರುವ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಅನುಬಂಧದನ್ವಯ ಕಾಮಗಾರಿಗಳ ಕ್ರಿಯಾ ಯೋಜನೆಗಳನ್ನು ಅನುಷ್ಠಾನಗೊಳಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎನ್.ನರಸಿಂಹಮೂರ್ತಿ)
ಸರ್ಕಾರ ಅಧೀನ ಕಾರ್ಯದರ್ಶಿ (ಪ್ರ)
ನಗರಾಭಿವೃದ್ಧಿ ಇಲಾಖೆ

ಇವರಿಗೆ:
1) ಮಹಾಲೇಖಪಾಲರು, ಲೆಕ್ಕ ತಪಾಸಣೆ/ಲೆಕ್ಕಪತ್ರ, ಕರ್ನಾಟಕ ಬೆಂಗಳೂರು.
2) ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು.

-3

3) ವಿಶೇಷ ಆಯುಕ್ತರು (ಯೋಜನೆ), ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು.
4) ನಿರ್ದೇಶಕರು, ವಿಜಾನೆ ಇಲಾಖೆ, ಪೋಡಿಯಂ ಬ್ಲಾಕ್, ವಿ.ವಿ.ಕೇಂದ್ರ, ಬೆಂಗಳೂರು.
5) ಜಂಟಿ ನಿರ್ದೇಶಕರು (ಹಣಕಾಸು), ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
6) ಉಪ ನಿರ್ದೇಶಕರು, ಮ್ಯಾನೇಜ್‌ಮೆಂಟ್ ನೆಟ್‌ವರ್ಕ್, ವಿಜಾನೆ ಇಲಾಖೆ, ವಿನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
7) ವಿಜಾನಾಧಿಕಾರಿಗಳು, ರಾಜ್ಯ ಹುಜೂರು ವಿಜಾನೆ, ಬೆಂಗಳೂರು.
8) ಮುವ್ಯ ಆರ್ಥಿಕಾಧಿಕಾರಿ, ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು.
9) ಮುವ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು.
10) ಸರ್ಕಾರದ ಅಪರ ಮುವ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
11) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-9), ವಿಧಾನ ಸೌಧ, ಬೆಂಗಳೂರು.
12) ಲೆಕ್ಕಾಧೀಕ್ಷಕರು, ಶಾಂತ್ರಿಕ ಕೋಶ, ನಗರಾಭಿವೃದ್ಧಿ ಇಲಾಖೆ.
13) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.